ಆ) ಒಳಾಂಗಣ ಕ್ರೀಡಾಂಗಣವನ್ನು ರೂ. 1.20 ಕೋಟಿ ಅಂದಾಜು ವೆಚ್ಚದಲ್ಲಿ ಕ್ರೀಡಾಂಗಣ ಸಮಿತಿ ತೀರ್ಮಾನ ಕೈಗೊಂಡಿದೆ.

ಇ) ಒಳಾಂಗಣ ಕ್ರೀಡಾಂಗಣದ ಅಂದಾಜು ವೆಚ್ಚವನ್ನು ಭರಿಸುವ ಮೂಲಗಳ ಬಗ್ಗೆ ಕ್ರೀಡಾಂಗಣ ಸಮಿತಿಯ ಪರಿಶೀಲನಾ ಹಂತದಲ್ಲಿದೆ.

ಮಿನಿ ವಿಧಾನಸೌಧ ನಿರ್ಮಾಣ

35 (159) ಶ್ರೀ ಆತ್ಮಾನಂದ ಎಂ.ಎಸ್. ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನಲ್ಲಿ "ಮಿನಿ ವಿಧಾನಸೌಧ"ದ ನಿರ್ಮಾಣ ಮಾಡಬೇಕಾದ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ವಿಷಯದಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಸರ್ಕಾರದ ಮಂಜೂರಾತಿ ದೊರಕಿದ ನಂತರ ಸಾಲ ಪಡೆದು ಮಿನಿ ವಿಧಾನಸೌಧ ನಿರ್ಮಾಣದ ಕಾರ್ಯವನ್ನು ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ಮಾಹಿತಿ

36 (203) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದ ವಿಸ್ತಾರ ಮತ್ತು ಅರಣ್ಯದ ಉತ್ಪಾದನೆಯ ಮಾಹಿತಿ ನೀಡುವುದು.

ಆ) ರಾಜ್ಯದ ಅರಣ್ಯ ಉತ್ಪಾದನೆಯ ವಿವಿಧ ಕಟ್ಟಿಗೆಯ ಮತ್ತು ಬೊಂಬು-ಬಿದಿರು ಹಾಗು ಬೆತ್ತ ಇವುಗಳ ಭೂ ಪ್ರದೇಶದ ವಿಸ್ತಾರ ಹಾಗೂ ಗುಣಮಟ್ಟ ಉತ್ಪನ್ನಗಳ ವಿವಿಧ ಮಾಹಿತಿ ನೀಡುವುದು.

ಇ) ರಾಜ್ಯದ ಅರಣ್ಯದ ಖರ್ಚು ಮತ್ತು ಹಣ ಉತ್ಪಾದನೆಯ ಮಾಹಿತಿಯನ್ನು ಜಿಲ್ಲಾವಾರು ವಿವರ ನೀಡುವುದು; (ಪ್ರತಿಶತ ವಿವಿಧ ಪ್ರಕಾರ ಬೆಳೆಯುವ ಮರದ ಪ್ರಮಾಣವನ್ನು ಒದಗಿಸುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕರ್ನಾಟಕದ ರಾಜ್ಯದ ಅರಣ್ಯ ಪ್ರದೇಶದ ಒಟ್ಟು ವಿಸ್ತಾರ - 3828430 ಹೆಕ್ಟೇರುಗಳು.

ತೇಗ, ಟರ್ಮಿನೇಲಿಯ, ಆಕೇಶಿಯ, ನೀಲಗಿರಿ, ಮೆದುಮರ, ಉರುವಲು, ಬೊಂಬು, ಗೋಡಂಬಿ, ಸಾಂಬಾರ ಪದಾರ್ಥಗಳು, ಬೆತ್ತ, ಶ್ರೀಗಧ, ಫಲತೋಟಗಳು, ಹಾಗೂ ಇತರೆ ಕಿರು ಅರಣ್ಯ ಉತ್ಪನ್ನಗಳು ಅರಣ್ಯ ಉತ್ಪಾದನೆಯಲ್ಲಿ ಸೇರಿರುತ್ತವೆ.

ಆ) 2001-02ನೇ ಸಾಲಿನವರೆಗೆ ಬೆಳೆಸಲಾದ ವಿವಿಧ ಜಾತಿಯ ನೆಡುತೋಪುಗಳು ಮತ್ತು ಅವುಗಳ ವಿಸ್ತಾರ

ನೆಡುತೋಪು	ವಿಸ್ತೀರ್ಣ ಹೆ.ಗಳಲ್ಲಿ
ವಿವಿಧ ಕಟ್ಟಿಗೆ	1,020,914

ಬೊಂಬು ಬಿದಿರು	20,569
ಬೆತ್ತ	4,310
ಮಿಶ್ರ ಜಾತಿ	5,25,815
ಒಟ್ಟು	**15,71,608**

ಉತ್ತಮ ಗುಣಮಟ್ಟದ ಕಟ್ಟಿಗೆ, ಹಸಿರು ಬಿದಿರು, ಹಾಗೂ ಬೆತ್ತ ಇವುಗಳು ರಾಜ್ಯದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಲಭ್ಯವಿರುತ್ತದೆ.

ಇ) 2001-2002ನೇ ಸಾಲಿನ ಖರ್ಚು ಮತ್ತು ಹಣ ಉತ್ಪಾದನೆ

ಹಣ ಉತ್ಪಾದನೆ (ರೂ. ಕೋಟಿಗಳಲ್ಲಿ)	ಖರ್ಚು (ರೂ. ಕೋಟಿಗಳಲ್ಲಿ)
100.16	177.86

ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.

ಈ) ಪ್ರತಿಶತ ವಿವಿಧ ಪ್ರಕಾರ ಬೆಳೆಯುವ ಮರದ ಪ್ರಮಾಣ ಕೆಳಕಂಡಂತಿದೆ:

ಪ್ರಕಾರ	ಒಟ್ಟ ಅರಣ್ಯದ ಶೇಕಡಾವಾರು
ನಿತ್ಯಹರಿದ್ವರ್ಣ ಮತ್ತು ಅರೆನಿತ್ಯ ಹರಿದ್ವರ್ಣ	15.15
ಅರ್ದ ಎಲೆ ಉದುರುವ	15.10
ಶುಷ್ಕಎಲೆ ಉದುರುವ	18.99
ಮುಳ್ಳುಕಂಟಿಗಳುಳ್ಳ ಅರಣ್ಯ	21.79
ಗಿಡಮರಗಳಿಲ್ಲದ ಅರಣ್ಯ	28.97
ಒಟ್ಟು	**100.00**

ವಿಧಾನಸಭೆ ಸದಸ್ಯರಾದ ಶ್ರೀ ಬೆಲ್ಲದ್‌ಚಂದ್ರಕಾಂತ್ ಗುರಪ್ಪ (ಧಾರವಾಡ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 203 ಪ್ರಶ್ನೆಗೆ ಅನುಬಂಧ

2001-02ನೇ ಸಾಲಿಗೆ ಅರಣ್ಯದ ಖರ್ಚು ಮತ್ತು ಹಣ ಉತ್ಪಾದನೆಯ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಆದಾಯ (ರೂಪಾಯಿಗಳಲ್ಲಿ) ಹಣ ಉತ್ಪಾದನೆ	ವೆಚ್ಚ (ರೂಪಾಯಿಗಳಲ್ಲಿ) ಖರ್ಚು
1.	ಬೆಂಗಳೂರು (ನ)	161,332,246.00	116,308,885.00
2.	ಬೆಂಗಳೂರು (ಗ್ರಾ)	6,208,092.00	93,365,662.00
3.	ಬೆಳಗಾಂ	15,892,036.98	142,359,176.00
4.	ಬಿಜಾಪುರ	2,243,584.00	16,054,326.00
5.	ಬಾಗಲಕೋಟೆ	2,350,961.00	14,942,559.00
6.	ಬಳ್ಳಾರಿ	23,408,364.57	72,532,284,94
7.	ಬೀದರ್	1,451,236.00	29,583,886.00
8.	ಚಿತ್ರದುರ್ಗ	4,537,274.55	55,502,356.00